ಪ್ರತಿಷ್ಠೆಗಾಗಿಯೊ ಅವಸರಕ್ಕಾಗಿಯೊ ಬೈಕಿಗರು, ಕಾರಿಗರು ಇದರ ಸುಖವನರಿಯರು. ಸೈಕಲಿನೊಳಗಾದರೆ ರಸ್ತೆಬದಿಯ ದೃಶ್ಯಗಳನ್ನು ನಿರಾಳವಾಗಿ ನೋಡುತ್ತ ಹವಾ ಸೇವನೆಮಾಡುತ್ತ ಗಂಧರ್ವರಂತೆ ವಿಹರಿಸಬಹುದು. 'ಅತಿವೇಗ ತಿಥಿಬೇಗ' ಎಂದೆಲ್ಲ ಎಂದು ಬೆನ್ನಮೇಲೆ ಬರೆದುಕೊಂಡಿರುವ ವಾಹನಗಳೇ ಹೆಚ್ಚು ಅನಾಹುತ ಎಸಗುತ್ತವೆ. ಸೈಕಲ್ಲಿನಲ್ಲಿ ವೇಗಮಿತಿ ತಾನಾಗಿಯೇ ಇದೆ. ಕಲ್ಲೆಡವಿ ನೆಲಕ್ಕೆ ಬಿದ್ದರೂ ಜೀವಹಾನಿಯಿಲ್ಲ. ಅಮೂಲ್ಯ ಇಂಧನ ಉಳಿಸಬಹುದು. ದೇಹವನ್ನು ಹುರಿಗಟ್ಟಿಸಿ ದೀರ್ಘಕಾಲ ಬದುಕಬಹುದು. ಈಚೆಗೆ ವೈದ್ಯರೇ ವಿವಿಧ ರೋಗಿಗಳಿಗೆ ಸೈಕಲ್ ಹೊಡೆಯುವ ಪಥ್ಯ ವಿಧಿಸುತ್ತಿದ್ದಾರೆ.

ಮೈಸೂರಿನಲ್ಲಿ ಮಾನಸಗಂಗೋತ್ರಿಯ ವಿಶಾಲ ರಸ್ತೆಗಳಲ್ಲಿ ನಮ್ಮ ಕೆಲವು ಪ್ರೊಫೆಸರುಗಳು ವಾರಕ್ಕೊಮ್ಮೆ ಸೈಕಲ್ಲಿನ ಮೇಲೆ ವಿಭಾಗಕ್ಕೆ ಬರುತ್ತಿದ್ದರು. ನಾವು ಅಂಬಾರಿಯಲ್ಲಿ ಬರುವ ಅರಸರನ್ನು ನೋಡುವಂತೆ ಅದನ್ನು ನೋಡುತ್ತಿದ್ದೆವು. ಮರದಡಿ ಹಾಸಿದ ಕಟ್ಟೆಗಳಲ್ಲಿ ತರಗತಿ ನಡೆಯುವ ಟ್ಯಾಗೋರರ ಶಾಂತಿನಿಕೇತನದಲ್ಲಿ ಇವತ್ತಿಗೂ ಸೈಕಲ್ ಬಿಟ್ಟು ಬೇರೆ ವಾಹನಗಳಿಗೆ ಪ್ರವೇಶವಿಲ್ಲ. ಚೀನಾದಲ್ಲಿ ಸೈಕಲ್ಲಿಗರಿಗೆ ಪ್ರತ್ಯೇಕ ಪಥಗಳಿವೆಯಂತೆ. ಆರೋಗ್ಯಕರ ಹವೆಗೆ ಹೆಸರಾಗಿದ್ದ ಬೆಂಗಳೂರಿನ ಹಳೇ ಚಿತ್ರಪಟಗಳನ್ನು ನೋಡುತ್ತಿದ್ದೆ. ವಿರಳ ಜನಸಂದಣಿಯ ನಡುವೆ ಗೊದ್ದಗಳಂತೆ ಹರಿದಾಡುವ ಸೈಕಲ್ಲುಗಳಿವೆ. ಕಾಲ ಹೇಗೆ ಬದಲಾಯಿತು! ಈಗಿನ ಬೆಂಗಳೂರಲ್ಲಿ 'ಸೈಕಲ್ಲು ಎತ್ತಿನಗಾಡಿ ತಳ್ಳುಗಾಡಿ ನಿಷೇಧಿಸಲಾಗಿದೆ' ಎಂಬ ಫಲಕವಿರುವ ರಸ್ತೆಗಳಿವೆ. ಸೈಕಲ್ಲಿನಲ್ಲೇ ಓಡಾಡುವ ಕ್ರಾಂತಿಕಾರಿ ಮಿತ್ರರೊಬ್ಬರು ಈ ಬಗ್ಗೆ ಶಾನೇ

